# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಾಸರಹಳ್ಳಿ ವಲಯ, ಹೆಗ್ಗನಹಳ್ಳಿ ಉಪವಿಭಾಗ

### ವಾರ್ಡ್ ನಂ.71 : ಹೆಗ್ಗನಹಳ್ಳಿ

**ದಿನಾಂಕ: 19.07.2021 ರಂದು ಬೆಳಿಗ್ಗೆ 11.00 ಗಂಟೆಗೆ ಶ್ರೀ ಬಿ.ಆರ್ ರವಿಕುಮಾರ್ ನೋಡಲ್ ಅಧಿಕಾರಿ, ವಾರ್ಡ್ 71 ರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಗ್ಗನಹಳ್ಳಿ ಉಪವಿಭಾಗ ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳು:**

ಸಭೆಯಲ್ಲಿ ಹಾಜರಿದ್ದವರು:

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ಬಿ.ಆರ್ ರವಿಕುಮಾರ್ | ನೋಡಲ್ ಅಧಿಕಾರಿ–ವಾರ್ಡ್ ನಂ.71, ಸಹಾಯಕ ನಿರ್ದೇಶಕರು (ಪಶುಪಾಲನೆ) |
| 2 | ಶ್ರೀ ಮಂಜುನಾಥ್ ಡಿ ಎಸ್ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಹಾಗೂ ಸಂಚಾಲಕರು–ವಾರ್ಡ್ 71 |
| 3 | ರಾಮಣ್ಣ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.71 |
| 4 | ವೆಂಕಟರಾಜು | ಸ್ಥಳೀಯ ನಾಗರೀಕರ ಕಲ್ಯಾಣ ಸಂಘ |
| 5 | ಹೆಚ್ ಟಿ ಮುನಿರಾಜು | ಕಂದಾಯ ವಸೂಲಿಗಾರರು– ವಾರ್ಡ್ 71 |
| 6 | ಎನ್ ಮುರುಳಿ | ಕಂದಾಯ ವಸೂಲಿಗಾರರು– ವಾರ್ಡ್ 71 |
| 7 | ಎಂ ಲಿಂಗಯ್ಯ | ಕಂದಾಯ ವಸೂಲಿಗಾರರು– ವಾರ್ಡ್ 71 |
| 8 | ಅನುಪಮ ಎನ್ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.71 |

:ನಡಾವಳಿಯ ವರದಿ:

- ಕಾರ್ಯದರ್ಶಿಗಳಾದ ಶ್ರೀ ಡಿ.ಎಸ್.ಮಂಜುನಾಥ್ ಮಾತನಾಡುತ್ತಾ ಸಭೆಗೆ ಹಾಜರಾದ ನೋಡಲ್ ಅಧಿಕಾರಿ ಹಾಗೂ ಪಾಲಿಕೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತ ಕೋರಿದರು.

- **<u>ಕೋವಿಡ್–19, ಸಾಂಕ್ರಾಮಿಕ ರೋಗದ ಬಗ್ಗೆ</u>**
  - ಸಭೆಯಲ್ಲಿ ರಾಮಣ್ಣ, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.71 ರವರು 12/07/2021 ರಿಂದ 18/07/2021 ರವರೆಗಿನ ಲಸಿಕಾಕರಣ ಹಾಗೂ ಕೋವಿಡ್ ತಪಾಸಣೆಗಾಗಿ ಸಂಬಂಧಿಸಿದ ವಿವರಗಳನ್ನು ಸಭೆಯಲ್ಲಿ ತಿಳಿಸಲಾಯಿತು.

- ಶ್ರೀ ಬಿ.ಆರ್ ರವಿಕುಮಾರ್, ನೋಡಲ್ ಅಧಿಕಾರಿರವರು ಮಾತನಾಡಿ ಕೋವಿಡ್ ಸೋಂಕು ವಾರ್ಡ್ ವ್ಯಾಪ್ತಿಯಲ್ಲಿ ಬೆರಳಣಿಕೆಯಲ್ಲಿ ಸೋಂಕು ಪತ್ತೆಯಾಗುತ್ತಿದ್ದು, ಇಳಿಕೆ ಕಾಣುತ್ತಿದ್ದರೂ ಸಹ ಮಾಸ್ಕ್ ಧರಿಸುವ ಹಾಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಂತೆ ಸೂಚಿಸಿದರು ಹಾಗೂ

ಸಾರ್ವಜನಿಕರಲ್ಲಿ ಲಸಿಕೆ ಹಾಕಿಸಿಕೊಳ್ಳುವ ಬಗ್ಗೆ ಹೆಚ್ಚಿನ ಪ್ರಚಾರ ಕೈಗೊಂಡು ಅರಿವು ಮೂ...
ಸೂಚಿಸಿದರು.

- ವೆಂಕಟರಾಜು, ಸ್ಥಳೀಯ ನಾಗರೀಕರ ಕಲ್ಯಾಣ ಸಂಘರವರು ಮಾತನಾಡಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂ... ಸುಂಕದಕಟ್ಟೆ ಪೈಪ್‌ಲೇನ್ ರಸ್ತೆಯಲ್ಲಿ ಪೈಪ್‌ಲೇನ್ ಅಳವಡಿಸಲು ಅಗೆದಿದ್ದು, ತೆಗೆದಿರುವ ಮಣ್ಣು ರಾಶಿ ಬಿದ್ದಿದ್ದು, ಇದರಿಂದ ಸಾರ್ವಜನಿಕರು ಹಾಗೂ ವಾಹನಗಳಿಗೆ ತುಂಬಾ ತೊಂದರೆಯಾಗುತ್ತಿದ್ದು, ಈ ಮಣ್ಣನ್ನು ತೆರವುಗೊಳಿಸುವಂತೆ ಸಂಬಂಧಪಟ್ಟ ಇಲಾಖೆಯವರಿಗೆ ಸೂಚಿಸುವಂತೆ ತಿಳಿಸಿದರು.
  - ಇದಕ್ಕೆ ಪ್ರತಿಕ್ರಿಯಿಸಿದ ಕಾರ್ಯದರ್ಶೀಯವರಾದ ಡಿ.ಎಸ್.ಮಂಜುನಾಥ್ ರವರು ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರವರಿಗೆ ಕರೆಮಾಡಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು, ಸದರಿಯವರು ಶೀಘ್ರವಾಗಿ ತೆರವುಗೊಳಿಸುವುದಾಗೀ ತಿಳಿಸಿದರು.

## BBMP SAHAYA APP:

- ಡಿ.ಎಸ್.ಮಂಜುನಾಥ್ ಸಹಾಯಕ ಅಭಿಯಂತರರು, ವಾರ್ಡ್ ನಂ.71 ಮಾತನಾಡಿ ನಮ್ಮ ಇಲಾಖೆಗೆ ಸಂಬಂಧಪಟ್ಟ ದೂರುಗಳಿಗೆ ಶೀಘ್ರಗತಿಯಲ್ಲಿ ಪರಿಹಾರಕ್ರಮ ಕೈಗೊಳ್ಳುತ್ತಿದ್ದು, ಯಾವುದೇ ಸಮಸ್ಯೆಗಳು ಬಾಕಿ ಇರುವುದಿಲ್ಲ ಎಂದು ತಿಳಿಸಿದರು.

ಸದಸ್ಯ ಕಾರ್ಯದರ್ಶಿ-ವಾರ್ಡ್ 71 ಹಾಗೂ
ಸಹಾಯಕ ಅಭಿಯಂತರರು,

(ಬಿ.ಆರ್ ರವಿಕುಮಾರ್)
ನೋಡಲ್ ಅಧಿಕಾರಿ ವಾರ್ಡ್-71

ಪ್ರತಿಯನ್ನು:

1) ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನಸಭಾ ಕ್ಷೇತ್ರ, ರವರ ಆದ್ಯ ಗಮನಕ್ಕೆ ಕಳುಹಿಸಿದೆ.
2) ಮಾನ್ಯ ವಲಯ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
3) ಜಂಟಿ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
4) ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ ವಿಭಾಗ) ರವರ ಮಾಹಿತಿಗಾಗಿ ಕಳುಹಿಸಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು (ಹೆಗ್ಗನಹಳ್ಳಿ) ರವರ ಮಾಹಿತಿಗಾಗಿ ಕಳುಹಿಸಿದೆ.
6) ಸಹಾಯಕ ಕಂದಾಯ ಅಧಿಕಾರಿ (ಹೆಗ್ಗನಹಳ್ಳಿ) ರವರ ಮಾಹಿತಿಗಾಗಿ ಕಳುಹಿಸಿದೆ.
7) ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.70 ರವರ ಮಾಹಿತಿಗಾಗಿ
8) ವಾರ್ಡ್ ಸಮಿತಿ ಸಭೆಯ ಸದಸ್ಯರಿಗೆ ಮಾಹಿತಿಗಾಗಿ ಕಳುಹಿಸಿದೆ.
9) ಕಛೇರಿ ಕಡತಕ್ಕೆ